SC 26/2023
PW.14

**ಎರಡನೇಯ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ ,**
**ಉಡುಪಿ ಜಿಲ್ಲೆ , ಉಡುಪಿ.**

**ಸೆಷನ್ಸ್ ಕೇಸ್ ನಂಃ 26/2023** **ಅ.ಸಾ.14**

**ಚಾ.ಸಾ.26**

| | | |
|---|---|---|
| ಸಾಕ್ಷಿದಾರರ ಹೆಸರು | - | ಶ್ರವಣ್ ಕುಮಾರ್ ರಾಥೋಡ್ |
| ತಂದೆಯ ಹೆಸರು | - | ಖೂಬಪ್ಪ ರಾಥೋಡ್ |
| ವಯಸ್ಸು | - | 44 ವರ್ಷ |
| ಉದ್ಯೋಗ | - | ಎಚ್ .ಸಿ. 162, ಮಣಿಪಾಲ ಪೋಲಿಸ್ ಠಾಣೆ |
| ವಿಳಾಸ | - | ಮಣಿಪಾಲ. |

ದಿನಾಂಕಃ 06-08-2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆಃ ಸರಕಾರಿ ಅಭಿಯೋಜಕರಿಂದಃ**

ನಾನು ಜೂನ್ 2015 ರಿಂದ 2023 ರವರೆಗೆ ಉಡುಪಿ ನಗರ ಠಾಣೆಯಲ್ಲಿ ಎಚ್.ಸಿ. ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ. ದಿನಾಂಕ 13.02.2020 ರಂದು ಈ ಪ್ರಕರಣದ ಮೂಲ ಪ್ರಥಮ ವರ್ತಮಾನ ವರದಿಯನ್ನು ಬೆಳಿಗ್ಗೆ 11-00 ಗಂಟೆಗೆ ನಗರ ಠಾಣೆಯಲ್ಲಿ ಠಾಣಾಧಿಕಾರಿ ಯಿಂದ ಸ್ವೀಕರಿಸಿರುತ್ತೇನೆ. ಅದೇ ಸಮಯ ಬೆಳಿಗ್ಗೆ 11-15 ಗಂಟೆಗೆ ನ್ಯಾಯಾಲಯಕ್ಕೆ ಬಂದಿದ್ದು, ಆದರೆ ತೆರೆದ ನ್ಯಾಯಾಲಯದಲ್ಲಿ ಕಲಾಪಗಳು ನಡೆಯುತ್ತಿದ್ದ ಕಾರಣ ಮಾನ್ಯ ನ್ಯಾಯಾಧೀಶರು ಪ್ರಥಮ ವರ್ತಮಾನ ವರದಿಯನ್ನು ಸಂಜೆ 5-15 ಗಂಟೆಗೆ ಸ್ವೀಕರಿಸಿರುತ್ತಾರೆ. ಸದ್ರಿ ಪ್ರಥಮ ವರ್ತಮಾನ ವರದಿಯ ಪ್ರತಿಯನ್ನು ಈಗಾಗಲೇ ನಿಪಿ-32 ಎಂದು ಗುರುತಿಸಲಾಗಿದೆ.

**ಆರೋಪಿತರ ಪರವಾಗಿ ಪಾಟೀ ಸವಾಲುಃ ಶ್ರೀ ಆರ್ .ಪಿ. ವಕೀಲರಿಂದಃ**

ನಮ್ಮ ಠಾಣೆಯಿಂದ ನ್ಯಾಯಾಲಯಕ್ಕೆ ಅಂದಾಜು 500 ಮೀ. ದೂರ ಇರುತ್ತದೆ. ಈ ಪ್ರಕರಣದ ಪ್ರಥಮ ವರ್ತಮಾನ ವರದಿ ಘೋರ ಅಪರಾಧಕ್ಕೆ ಸಂಬಂಧಪಟ್ಟ ತುರ್ತು ಪ್ರಥಮ ವರ್ತಮಾನ ವರದಿ ಆಗಿರುತ್ತದೆ. ನಾನು ನಾಲ್ಕು ವರ್ಷಗಳಿಂದ ನ್ಯಾಯಾಲಯದ ಕರ್ತವ್ಯ

ಮಾಡುತ್ತಿದ್ದೇನೆ. ಆ ಸಮಯದಲ್ಲೂ ಸಹಾ ನಾನು ನ್ಯಾಯಾಲಯದ ಕರ್ತವ್ಯವನ್ನೇ ಮಾಡುತ್ತಿದ್ದೆನು. ಸಾಮಾನ್ಯವಾಗಿ ನಾನು ನ್ಯಾಯಾಲಯಕ್ಕೆ ಬೆಳಿಗ್ಗೆ 10-30 ಕ್ಕೆ ಬರುತ್ತೇನೆ. ನಾನು ಪ್ರಥಮ ವರ್ತಮಾನ ವರದಿಯನ್ನು ಸಂಜೆ 5-00 ಗಂಟೆಗೆ ಪಡೆದಿದ್ದೇನೆ ಮತ್ತು ಅದೇ ಸಮಯಕ್ಕೆ ತಂದು ನ್ಯಾಯಾಲಯಕ್ಕೆ ಕೊಟ್ಟಿದ್ದೇನೆ ಎಂದರೆ ಸರಿಯಲ್ಲ. ವಿಳಂಬದ ಬಗ್ಗೆ ತನಿಖಾಧಿಕಾರಿ ನನ್ನ ಹೇಳಿಕೆ ಪಡೆದುಕೊಂಡಿಲ್ಲ. ವಿಳಂಬದ ಬಗ್ಗೆ ಸುಳ್ಳು ಕಾರಣ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ -** ಇಲ್ಲ -

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)

ಓದಿ ಹೇಳಲಾಗಿ ಕೇಳಿ ಸರಿ ಇದೆ ಎಂದು ಒಪ್ಪಿದರು.

ಎರಡನೇಯ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಉಡುಪಿ.